ಇದಕ್ಕೆ ತಾವು ೬೩ ಮೈಲಿ ಎಂದು ಉತ್ತರ ಕೊಟ್ಟಿದ್ದೀರಿ, ಗುಲ್ಬರ್ಗ ಜಿಲ್ಲೆಯಲ್ಲಿ ಎಷ್ಟು ಮೈಲಿಗಳವರೆಗೆ ತಾವು ಕೆಲಸವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಎಚ್. ಎನ್. ನಂಜೇಗೌಡ— ಕನ್ಸಾಲಿಡೇಟ್ ಮಾಡಿ ಕೊಡುತ್ತೇನೆ.

ಶ್ರೀ ಬಾಪೂಗೌಡ ರಾಯಪ್ಪ— ನನ್ನ ಪ್ರಶ್ನೆಗೆ ಪೂರ್ಣ ಉತ್ತರ ಸಿಕ್ಕಲಿಲ್ಲ. ದಯವಿಟ್ಟು ಇದನ್ನು ತಡೆಹಿಡಿಯಬೇಕು

ಅಧ್ಯಕ್ಷರು— ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

ARECA MARKETING CO-OPERATIVE SOCIETY, TUMKUR

259. Sri R. Chikkaiah (Madhugiri).— Will the Minister for Co-operation be pleased to state:—

(a) the amount of loss sustained and the amount misapproprated by the Areca Marketing Co-operative Society, Tumkur;

(b) whether any action has been taken against the concerned Secretary so far; if so, what action has been taken;

(c) the action taken to set right the affairs of the said Society ?

Sri A. Shankara Alva (Minister for Co-operation).—

(a) Loss sustained is Rs. 2,30,244-15 p. according to Audit Report. Amount misappropriated Rs. 1,99,430-16.

(b) Yes.

The following action has been taken :

1. The Secretary was kept under suspension (now reinstated) and enquiry under M. C. S. (CC and A) Rules, 1957 has been ordered appointing the Deputy Registrar of Co-operative Societies, Tumkur as Enquiry Officer.

2. Surcharge case has been ordered by the Registrar of Co-operative Societies against the Secretary and other persons responsible.

(c) 1. The Secretary has been transferred.

2. Action has been taken to get the accounts of the Society audited for the years 1971–72 and 1972–73.

3. Surcharge case has also been orderd.

ಶ್ರೀ ಆರ್. ಚಿಕ್ಕಯ್ಯ.— ಉತ್ತರದಲ್ಲಿ ತಿಳಿಸಿರುವಂತೆ ದುರುಪಯೋಗ ಪಡಿಸಲಾದ ಮೊಬಲಗಿನ ಬಗ್ಗೆ ಸಂಬಂಧಪಟ್ಟವರ ವೇಲಿ ಕೇಸು ಹಾಕಿದ್ದೀರಾ?

ಶ್ರೀ ಎ. ಶಂಕರ ಆಳ್ವ.— ಇನ್ನೂ ಆಕೌಂಟ ಆಡಿಟ ಆಗಿಲ್ಲ. ಈ ವಿಷಯದಲ್ಲಿ ಸರ್ಚಾರ್ಜ್ ಪ್ರೊಸೀಡಿಂಗ್ಸ್ ತೆಗೆದುಕೊಳ್ಳಲಾಗಿದೆ. ಸೆಕ್ರೆಟರಿಯನ್ನು ೧೧–೧–೭೩ರಲ್ಲಿ ಸಸ್ಪೆಂಡ್‌ಮಾಡಿದೆ. ತನಿಖೆಯಾಗುವುದು ನಿಧಾನವಾದ್ದರಿಂದ ಸೆಕ್ರೆಟರಿಯನ್ನು ಮತ್ತೆ ಕೆಲಸಕ್ಕೆ ತೆಗೆದುಕೊಂಡು ಬೇರೆ ಕಡೆಗೆ ವರ್ಗ ಮಾಡಲಾಗಿದೆ. ಎನಕ್ವೈರಿ ಮಾಡಲು ಡೆಪ್ಯುಟಿ ರಿಜಿಸ್ಟ್ರಾರರನ್ನು ಹಾಕಿದೆ. ಎನಕ್ವೈರಿ ಮಾಡಲು ಸಿ. ಬಿ. ಐ. ದೆಹಲಿ ಇಲ್ಲಿಗೆ ರೆಫರ ಮಾಡಿರುವುದರಿಂದ ವಿಳಂಬವಾಗಿದೆ.

ಶ್ರೀ ಆರ್. ಚಿಕ್ಕಯ್ಯ.— ಈ ಬಗ್ಗೆ ಮಿಸಅಪ್ರೋಪ್ರಿಯೇಷನ್ ವಿಚಾರದಲ್ಲಿ ಸೆಕ್ರೆಟರಿಯವರಮೇಲೆ ಕೇಸು ಹಾಕಲಾಗಿದೆಯೇ ?

ಶ್ರೀ ಎಂ. ಶಂಕರ ಆಳ್ವ.—ಇನ್ನೂ ಇದನ್ನು ಎಗ್ಸಾಮಿನ್ ಮಾಡುತ್ತಿದ್ದಾರೆ. ಈ ಕೆಲಸ ಪೂರ್ಣವಾಗಿಲ್ಲ. ಇದು ತಕ್ಷೀರಾಗುತ್ತದೆಯೇ ಎಂದು ಪರಿಶೀಲಿಸಿ ಆಗುವುದಾದರೆ ಪೋಲೀಸರಿಗೆ ದೂರು ಕೊಡುವರು.

ಶ್ರೀ ಆರ್. ಚಿಕ್ಕಯ್ಯ.—ಸೆಕ್ರೆಟರಿಯವರನ್ನು ಸಸ್ಪೆಂಡ್‌ಮಾಡಿದಮೇಲೆ ಮತ್ತೆ ಕೆಲಸಕ್ಕೆ ತೆಗೆದುಕೊಂಡಿರುವುದಕ್ಕೆ ಕಾರಣವೇನು?

ಶ್ರೀ ಎಂ. ಶಂಕರ ಆಳ್ವ.— ಎಂಟು ತಿಂಗಳವರಗೆ ಸಸ್ಪೆಂಡ್ ಮಾಡಿದ್ದರೂ ತನಿಖೆ ಮಾಡಲು ಸಾಧ್ಯವಾಗಲಿಲ್ಲ. ಆದುದರಿಂದ ಅವರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಂಡಿದೆ.

ಶ್ರೀ ಆರ್. ಚಿಕ್ಕಯ್ಯ.— ಸಸ್ಪೆಂಡ್ ಮಾಡಿರುವ ಅವಧಿಯನ್ನು ಎಕ್ಸ್‌ಟೆಂಡ್ ಮಾಡಲು ಅಧಿಕಾರವಿಲ್ಲವೇ?

ಶ್ರೀ ಎಂ. ಶಂಕರ ಆಳ್ವ — ತನಿಖೆಯಾಗಲು ಹೆಚ್ಚು ಸಮಯವಾಗಬಾರದು ಎಂಬ ಅಭಿಪ್ರಾಯವಿದೆ. ನಿಧಾನವಾಗಬಹುದೆಂದು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ. ತಪ್ಪು ಕಂಡುಬಂದರೆ ಶಿಕ್ಷೆ ಮಾಡಬಹುದು.

ಶ್ರೀ ಬಿ. ವಿ. ಕಕ್ಕಿಲಾಯ.—ಇಷ್ಟು ದೊಡ್ಡ ಹಣ ಸಾರ್ವಜನಿಕರಿಗೆ ಸಂಬಂಧ ಪಟ್ಟಿರುವುದು ದುರುಪಯೋಗವಾಗಿರುವಾಗ ಸೆಕ್ರೆಟರಿಯನ್ನು ೮ ತಿಂಗಳು ಸಸ್ಪೆನಷನ್ನಿನಲ್ಲಿಟ್ಟರೂ ತನಿಖೆ ಪೂರ್ಣಮಾಡಲು ಆಗಿಲ್ಲ. ಅವರಮೇಲೆ ಕ್ರಿಮಿನಲ್ ಪ್ರೊಸೀಡಿಂಗ್ಸ್ ಜರುಗಿಸುವುದು ಸೂಕ್ತವಲ್ಲವೇ?

ಶ್ರೀ ಎ. ಶಂಕರ ಆಳ್ವ — ಮೊದಲು ತನಿಖೆಯಾಗಬೇಕು. ಸೆಂಟ್ರಲ್ ಬ್ಯೂರೋ ಆಫ್ ಇನ್‌ವೆಸ್ಟಿಗೇಷನನವರಿಗೆ ಈ ವಿಚಾರ ರೆಫರ್ ಮಾಡಿದೆ. ತನಿಖೆ ನಡೆಯುತ್ತಿದೆ. ಬುಕ್ಸ್ ಸೀಜ್ ಮಾಡಿದ್ದಾರೆ. ತನಿಖೆಯಾದ ನಂತರ ತಪ್ಪಿದ್ದರೆ ಕ್ರಿಮಿನಲ್ ಕೇಸನ್ನು ಹಾಕುತ್ತೇವೆ.

PREMATURE RETIREMENT BENEFITS TO TEACHERS

293. Sri T. R. SHAMANNA (Fort).—

Will the Minister for Education be pleased to state:—

(a) whether premature retirement benefits have been given to the teachers who were retired prematurely between 1950 and 1968; if not, the reasons for the same;

(b) whether it is a fact that the Supreme Court has issued directions to the effect that premature retirement benefits be given to all teachers who were retired between 1958 and 1968 as well as those who retired before 1956;

(c) if so, whether Government have given effect to the directions of the Supreme Court?

Sri A. R. BADARINARAYANA (Minister for Education)

(a) Yes.

(b) Yes.

(c) Yes.

ಶ್ರೀ ಟಿ. ಆರ್. ಶಾಮಣ್ಣ.—ನಿಗದಿಗೊಳಿಸಿದ ಕಾಲಕ್ಕಿಂತ ಮುಂಜೆ ರಿಟೈರ ಆದ ಕೆಲವರಿಗೆ ಪರಿಹಾರ ನೀಡಿಲ್ಲ. ಅಂಥ ಸಂಧರ್ಭಗಳನ್ನು ಗಮನಕ್ಕೆ ತಂದರೆ ಅವರಿಗೆ ಸೂಕ್ತ ಪರಿಹಾರಿ ಕೊಡಲು ಅಶ್ವಾಸನೆ ಕೊಡುವಿರಾ?

† ಶ್ರೀ ಎ ಆರ್. ಬದರೀನಾರಾಯಣ್.— ಈಗ ಈ ಸಂಬಂಧವಾದ ಅನೇಕ ಸಂದರ್ಭಗಳಲ್ಲಿ ಪರಿಹಾರ ನೀಡಲಾಗಿದೆ. ಕೆಲವು ಕೇಸುಗಳು ಸುಮಾರು ಆರು ಇರಬಹುದು- ಉಳಿದಿವೆ. ಅವನ್ನು ಬೇಗ ಇತ್ಯರ್ಥಮಾಡುತ್ತೇವೆ

ಶ್ರೀ ಟಿ ಆರ್. ಶಾಮಣ್ಣ.— ಸ್ಪೆಸಿಫಿಕ್ ಕೇಸಸ್ ನಾನು ಹೇಳಿದರೆ ಬೇಗ ಆ ಸಂಬಂಧದಲ್ಲಿ ತಕ್ಕ ಪರಿಹಾರ ಕೊಡುವಿರಾ?

ಶ್ರೀ ಎ. ಆರ್. ಬದರೀನಾರಾಯಣ:—ಎಲ್ಲವನ್ನೂ ಜಾಗ್ರತೆ ಇತ್ಯರ್ಥ ಮಾಡುತ್ತೇನೆ.

ಶ್ರೀ ಜೆ. ಎಲ್. ಕಬಾಡಿ.—(ಎ) ಪ್ರಶ್ನೆಗೆ ಕೊಟ್ಟಿರುವ ಉತ್ತರ ಸರಿಯಾಗಿಲ್ಲ. ಇದಕ್ಕೆ ಕಾರಣವೇನು?